# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 13 |
| 2. | ಸದಸ್ಯರ ಹೆಸರು | : | ಡಾ ಬಿ.ಜಿ ಪಾಟೀಲ್ |
| 3. | ಉತ್ತರಿಸುವ ದಿನಾಂಕ | : | 17/08/2026 |
| 4. | ಉತ್ತರಿಸುವ ಸಚಿವರು | : | ಮಾನ್ಯ ಲೋಕೋಪಯೋಗಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯಲ್ಲಿ ಬರುವ ಚಿತ್ತಾಪುರದ ಹೃದಯ ಭಾಗದಲ್ಲಿರುವ ಕನ್ನಡ ಭವನ ನಿರ್ಮಿಸಲು ಸರ್ಕಾರ ನೀಡಿರುವ ಅನುದಾನ ಎಷ್ಟು ಹಾಗೂ ಸದರಿ ಭವನದ ಕಾಮಗಾರಿಗಳು ಪೂರ್ಣಗೊಂಡಿವೆಯೇ ಪೂರ್ಣಗೊಂಡಿದ್ದಲ್ಲಿ ಕನ್ನಡ ಭವನ ಕಟ್ಟಡವನ್ನು ಕನ್ನಡ ಸಾಹಿತ್ಯ ಪರಿಷತ್ ವಶಕ್ಕೆ ಯಾವಾಗ ಹಸ್ತಾಂತರಿಸಲಾಗುವುದು; | ಕಲಬುರಗಿ ಜಿಲ್ಲೆಯಲ್ಲಿ ಬರುವ ಚಿತ್ತಾಪೂರ ತಾಲೂಕಿನ ಹೃದಯ ಭಾಗದಲ್ಲಿರುವ ಕನ್ನಡ ಭವನ ನಿರ್ಮಾಣ ಕಾಮಗಾರಿಯನ್ನು ಕೆ.ಆರ್.ಡಿ.ಐ.ಎಲ್ ವತಿಯಿಂದ ಲಿಂಟೆಲ್ ವರೆಗೂ ಕಟ್ಟಡ ಕಾಮಗಾರಿ ಕೈಗೊಂಡಿರುತ್ತಾರೆ. ಮುಂದುವರೆದು ಅಪೂರ್ಣವಾಗಿರುವ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಗೆ 2021-22ನೇ ಸಾಲಿನ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ಜಿಲ್ಲಾಧಿಕಾರಿಗಳು, ಕಲಬುರಗಿ ಇವರು ರೂ.35.08 ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ. ಸದರಿ ಮೊತ್ತಕ್ಕೆ ಸೀಮಿತಗೊಳಿಸಿ ಕಟ್ಟಡದ ಮೇಲ್ಛಾವಣಿ ಹಾಗೂ ಕಟ್ಟಡದ ಗೋಡೆ ಕಾಮಗಾರಿ ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ.<br><br>ಇದರಲ್ಲಿ ಇನ್ನು ಹಲವು ಅಂಶಗಳು ಅಂದರೆ ಪೈಂಟಿಂಗ್, ಕಾಂಪೌಂಡ್ ವಾಲ್ ವಿದ್ಯುತ್ ಮತ್ತು ಇನ್ನಿತರ ಕಾಮಗಾರಿ ನಿರ್ವಹಿಸುವುದು ಬಾಕಿ ಇರುವುದರಿಂದ ಹೆಚ್ಚುವರಿ ಅನುದಾನವನ್ನು ಜಿಲ್ಲಾಧಿಕಾರಿಗಳು ಕಲಬುರಗಿರವರು ದಿನಾಂಕ:05/06/2026 ರಂದು ಮಾನ್ಯ ಸಂಸತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ 1) 2021-22 ನೇ ಸಾಲಿನ ಅನುದಾನದಲ್ಲಿ ರೂ.10.00 ಲಕ್ಷಗಳು, (2) 2022-23 ನೇ ಸಾಲಿನ ಅನುದಾನದಲ್ಲಿ ರೂ.10.00 ಲಕ್ಷಗಳು (3) 2023-24 ನೇ ಸಾಲಿನ ಅನುದಾನದಲ್ಲಿ ರೂ. 28.00 ಲಕ್ಷಗಳ ಅನುದಾನವನ್ನು ಒದಗಿಸಿರುತ್ತಾರೆ.<br><br>ಈ ಅನುದಾನ ಮಿತಿಯಲ್ಲಿ ಕನ್ನಡ ಸಾಹಿತ್ಯ ಭವನದ ಬಾಕಿ ಉಳಿದ ಕಾಮಗಾರಿ ಅಂಶಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಆಡಳಿತಾತ್ಮಕ ಅನುಮೋದನೆಗಾಗಿ ಜಿಲ್ಲಾಧಿಕಾರಿಗಳು ಕಲಬುರಗಿ ರವರಿಗೆ ದಿನಾಂಕ:24.07.2026 ರಂದು ಸಲ್ಲಿಸಲಾಗಿದೆ. ಆಡಳಿತಾತ್ಮಕ ಅನುಮೋದನೆಗೂಂಡ ನಂತರ ತಾಂತ್ರಿಕ ಮಂಜೂರಾತಿ ಪಡೆದುಕೊಂಡು ನಿಯಮಾನುಸಾರ ಟೆಂಡರ್ ಕರೆದು, ಗುತ್ತಿಗೆ ನೀಡಿ ಕಾಮಗಾರಿ ಪೂರ್ಣ ಪ್ರಮಾಣದಲ್ಲಿ ನಿರ್ವಹಿಸಿದ ನಂತರ ಕಟ್ಟಡ ಹಸ್ತಾಂತರಿಸಲಾಗುವುದು. |
| ಆ) | ಕನ್ನಡ ಭವನವನ್ನು ಕನ್ನಡ ಸಾಹಿತ್ಯ ಪರಿಷತ್ ವಶಕ್ಕೆ ಇದುವರೆವಿಗೂ ಹಸ್ತಾಂತರಿಸದಿರಲು ಕಾರಣವೇನು; ಕನ್ನಡ ಸಾಹಿತ್ಯ ಪರಿಷತ್‌ನ ಚಟುವಟಿಕೆಗಳಿಗೆ ಸದರಿ ಕಟ್ಟಡ ಲಭ್ಯವಿಲ್ಲದ ಕಾರಣ ಅಜೀವ ಸದಸ್ಯರು ಬೇಸರ ವ್ಯಕ್ತ ಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯ; ಬಂದಿದ್ದಲ್ಲಿ, ಸರ್ಕಾರ ಇದುವರೆವಿಗೂ ಕೈಗೊಂಡ ಕ್ರಮಗಳೇನು; | |
| ಇ) | ಕನ್ನಡ ಭವನದ ಕಾಮಗಾರಿಯನ್ನು ನಿರ್ವಹಿಸಿದ ಗುತ್ತಿಗೆದಾರರು ಬರಬೇಕಾದ ಹಣ ಕೈಸೇರುತ್ತಿಲ್ಲವೆಂದು ಭವನಕ್ಕೆ ಬೀಗ ಹಾಕಿ ಕಣ್ಮರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? (ವಿವರ ನೀಡುವುದು) | ಲೋಕೋಪಯೋಗಿ ಇಲಾಖೆ ವತಿಯಿಂದ ಕನ್ನಡ ಭವನ ಕಟ್ಟಡ ಕಾಮಗಾರಿಗೆ 2021-22 ನೇ ಸಾಲಿನ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ರೂ.35.08 ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ. ಸದರಿ ಮೊತ್ತಕ್ಕೆ ನಿಯಮಾನುಸಾರ ಟೆಂಡರ್ ಕರೆದು ರೂ.31.47 ಲಕ್ಷಗಳಿಗೆ ಗುತ್ತಿಗೆ ನೀಡಿ, ಕಾಮಗಾರಿ ಪೂರ್ಣಗೊಳಿಸಿ ಗುತ್ತಿಗೆದಾರರಿಗೆ ಸಂಪೂರ್ಣವಾಗಿ ರೂ.31.10 ಲಕ್ಷಗಳ ಹಣ ಪಾವತಿಸಲಾಗಿರುತ್ತದೆ ಹಾಗೂ ಗುತ್ತಿಗೆದಾರರಿಗೆ ಸರ್ಕಾರದಿಂದ ಹಣ ಪಾವತಿಸುವುದು ಬಾಕಿ ಇರುವುದಿಲ್ಲ. |

**ಸಂಖ್ಯೆ: ಲೋಇ 54 ಬಿಎಲ್ ಕ್ಯೂ 2026**

**(ಸತೀಶ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು.